**ಪ್ರಧಾನ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು**

ದಿಃ 12-01-2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರ ಶ್ರೀ.MJS ವಕೀಲರವರಿಂದಃ---**

ನಮ್ಮ ಜಮೀನಿನ ಸರ್ವೆನಂ.73 ರಲ್ಲಿ 1 ಕಾಲು ಎಕರೆ, ಸರ್ವೆನಂ.35 ರಲ್ಲಿ 1 ಎಕರೆ, ಸರ್ವೆನಂ.34 ರಲ್ಲಿ 20 ಗುಂಟೆ ಮತ್ತು ಉಳಿದ ಸರ್ವೆನಂ.ಗಳಲ್ಲಿ ಸ್ವಲ್ಪ ಸ್ವಲ್ಪ ಜಮೀನು ಇದೆ. ಸದರಿ ಜಮೀನುಗಳು ಹರಳಹಳ್ಳಿ ಗ್ರಾಮದಲ್ಲಿದೆ. ನಾನು ವಿಜಯ ಬ್ಯಾಂಕ್ ಮತ್ತು ಕೆಜಿಬಿ ಬ್ಯಾಂಕ್ ನಲ್ಲಿ ಖಾತೆ ಹೊಂದಿದ್ದೆನೆ. ಸದರಿ ಖಾತೆಯ ಪಾಸ್ ಪುಸ್ತಕ ಹಾಜರುಪಡಿಸುತ್ತೇನೆ.

ಚನ್ನಪಟ್ಟಣದ ಪಟ್ಟಣದ ಸರಗೂರು ಗ್ರಾಮದ ಬಸವರಾಜು ರವರ ಪರಿಚಯವಿದೆ. ಸದರಿಯವರು ಈಗ ನೋಡುತ್ತಿರುವ ಪೋಟೋದಲ್ಲಿರುವವರು ಆಗಿರುತ್ತಾರೆಂದರೆ ಸರಿ. ಸದರಿ ಪೋಟೋವನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿಯವರು ನಿಪಿ-1 ರ ಚೆಕ್ ನ್ನು ನನಗೆ ನೀಡಿರುತ್ತಾರೆಂದರೆ ಸರಿಯಲ್ಲ. ಸದರಿ ಬಸವರಾಜು ರವರು ಆರೋಪಿಯ ವಿರುದ್ಧ ರಾಮನಗರದಲ್ಲಿ ಮತ್ತೊಂದು ಚೆಕ್ ಬೌನ್ಸ್ ಪ್ರಕರಣ ಸಿಸಿ ನಂ.283/2021 ರಂತೆ ದಾಖಲಿಸಿದ್ದಾರೆಂದರೆ ಇರಬಹುದು, ಸಾಕ್ಷಿ ಮುಂದುವರೆದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಪಿ-1 ರ ಚೆಕ್ ನಂ. 000136 ಆಗಿದೆ. ಈಗ ನೋಡುತ್ತಿರುವ ಪೋಟೋದಲ್ಲಿರುವ ಚೆಕ್ ನಂಬರ್ 000136 ಆಗಿದೆ. ಈಗ ನೋಡುತ್ತಿರುವ ಪೋಟೋದಲ್ಲಿರುವ ಚೆಕ್ ನಂಬರ್ 000135 ಆಗಿದೆ. ಸದರಿ ಪೋಟೋಗಳನ್ನು ನಿಡಿ-2 ಮತ್ತು ನಿಡಿ-3 ಎಂದು ಗುರುತಿಸಲಾಯಿತು. ಸದರಿ ಎರಡು ಚೆಕ್ ಗಳನ್ನು ಸರಗೂರಿನ ಬಸವರಾಜು ರವರಿಗೆ ನೀಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ.

ಆರೋಪಿಯ ಆಧಾರ್ ಕಾರ್ಡ್ ನ್ನು ಹಾಜರುಪಡಿಸಲು ತೊಂದರೆ ಇದೇಯೇ ಎಂದರೆ ಸಾಕ್ಷಿ ನನ್ನ ಬಳಿ ಸದರಿಯವರ ಆಧಾರ್ ಕಾರ್ಡ್ ಇಲ್ಲ ಎನ್ನುತ್ತಾರೆ. ಬ್ಯಾಂಕ್ ನಿಂದ ಖಾತೆಯಲ್ಲಿ ಹಣವಿಲ್ಲ ಎಂದು ಹಿಂಬರಹ ಬಂದಿರುತ್ತದೆ. ನಾನು ರವಿ ಎಂಬ ವಕೀಲರನ್ನು ನೇಮಿಸಿಕೊಂಡಿದ್ದೆನೆ. ಪ್ರಕರಣದ ಮಾಹಿತಿಯನ್ನು ನಾನೇ ಅವರಿಗೆ ನೀಡಿದ್ದೆನೆ. ಸದರಿಯವರು ನೋಟೀಸ್ ನಲ್ಲಿ ಏನು ನಮೂದಿಸಿದ್ದಾರೆಂದು ತಿಳಿದುಕೊಂಡಿದ್ದೆನೆ. ಸದರಿ ನೋಟೀಸ್ ನಲ್ಲಿ ಬ್ಯಾಂಕಿನವರು ಚೆಕ್ ನ್ನು ಏಕೆ ಹಿಂದಿರುಗಿಸಿದ್ದಾರೆಂದು ನಮೂದಿಸಲಾಗಿದೆ ಎಂಬ ಬಗ್ಗೆ ಇಂಗ್ಲೀಷ್ ಆಗಿರುವುದರಿಂದ ತಿಳಿದುಕೊಂಡಿಲ್ಲ. ನಾನು ವ್ಯವಸಾಯದ ಬೆಳೆಗಳನ್ನು ಸರಬರಾಜು ಮಾಡುವ ಬಗ್ಗೆ ಸರಬರಾಜು ಮಾಡಿದ ಇಲಾಖೆಗಳಿಂದ ದಾಖಲಾತಿ ಪಡೆದು ಹಾಜರುಪಡಿಸಿಲ್ಲ ಎಂದರೆ ಸರಿ. ಸದರಿ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ನಾನು ಬಿಪಿಎಲ್ ಕಾರ್ಡ್ ಹೊಂದಿದ್ದೆನೆ. ನನಗೆ ಆರೋಪಿಯ ಪರಿಚಯವಿರದೇ ನನ್ನ ಅಳಿಯ ಸಂತೋಷ್ ರವರ ಮೂಲಕ ನಿಪಿ-1 ರ ಚೆಕ್ ಪಡೆದುಕೊಂಡಿದ್ದೆನೆಂದರೆ ಸರಿಯಲ್ಲ. ಆರೋಪಿಯು ನನ್ನ ಅಳಿಯನ ಸ್ನೇಹಿತರು ಎಂದು ತೋರಿಸಲು ಯಾವುದೇ ಪೋಟೋ ಹಾಜರುಪಡಿಸಿಲ್ಲ. ಸದರಿ ಯಾವುದೇ ಪೋಟೋ ಇಲ್ಲ. ಸದರಿ ವಿಚಾರವಾಗಿ ನನ್ನ ಅಳಿಯನನ್ನು ಸಾಕ್ಷಿ ವಿಚಾರಣೆ ಮಾಡಿಲ್ಲ, ವಿಚಾರಣೆ ಮಾಡಲು ತೊಂದರೆ ಇಲ್ಲ. ಆರೋಪಿಯವರು ಬಿಡದಿಯ ಹೆಚ್ ಡಿ ಎಫ್ ಸಿ ಬ್ಯಾಂಕ್ ನ ಚೆಕ್ ನ್ನು ನೀಡಿರುತ್ತಾರೆ. ಪ್ರಕರಣದ ವಿಚಾರವನ್ನು ಬಸವರಾಜು ರವರು ಹೇಳಿ ಬರೆಸಿದ್ದು ನನಗೆ ಯಾವುದೇ ವಿಚಾರ ಗೊತ್ತಿಲ್ಲ ಎಂದರೆ ಸರಿಯಲ್ಲ. ಚೆಕ್ ನಂ.000135 ಮತ್ತು 000136 ಗಳನ್ನು ನನ್ನ ಸ್ನೇಹಿತನಾದ ಬಸವರಾಜು ರವರಿಗೆ ಆರೋಪಿಯು ನೀಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ

ಮುಂದುವರೆದು 1 ಚೆಕ್ ನ್ನು ನನಗೆ ನೀಡಿದ್ದರು ಎಂದು ನುಡಿಯುತ್ತಾರೆ. ಸದರಿ ದಾಖಲೆಗಳನ್ನು ನೀಡುವಾಗ ಪೋಟೋ ಮತ್ತು ವಿಡಿಯೋವನ್ನು ಮಾಡಿಕೊಂಡಿದ್ದಾರೆಂದರೆ ನನಗೆ ಗೊತ್ತಿಲ್ಲ. ಆರೋಪಿಯು ನನಗೆ ಪರಿಚಯವೇ ಇಲ್ಲದೇ ಇದ್ದರೂ ಬಸವರಾಜು ರವರ ಮೂಲಕ ವಿಚಾರ ತಿಳಿದುಕೊಂಡು ಸುಳ್ಳು ಪ್ರಕರಣ ದಾಖಲಿಸಿದ್ದೇನೆಂದರೆ ಸರಿಯಲ್ಲ. ಆರೋಪಿಯ ದೂರವಾಣಿ ನಂಬರ್ ನನಗೆ ಗೊತ್ತಿಲ್ಲ. ನಾನು ಯಾವುದೇ ಕರೆ ಮಾಡಿಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮದ್ದೂರು